# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ ಹೊಸಪೇಟೆ.

**ಸಿ.ಸಿ.ನಂ.181/2017**

ಫಿರ್ಯಾದಿದಾರರು ರಾಜ್ಯದ ಪರವಾಗಿ ಹೊಸಪೇಟೆ ನಗರ ಪೋಲೀಸ್ ಠಾಣೆ.

ವಿರುದ್ಧ

ಆರೋಪಿ : ಎಜಾಸ್ ಅಹಮ್ಮದ್

ಆಪಾಧನೆ

ಶ್ರೀ ಆನಂದ ಎಸ್. ಕರಿಯಮ್ಮನವರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ.ದ.ನ್ಯಾ.ದಂಗಳ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಅಂದರೆ,

ಎಜಾಸ್ ಅಹಮ್ಮದ್ ತಂದೆ ಆರ್ .ಕೆ ಯುನುಸ್
ಸುಮಾರು **23** ವರ್ಷ ವಯಸ್ಸು,
ಮಟನ ವ್ಯಾಪಾರ
ವಾಸ **18** ನೇ ವಾರ್ಡ, ಗುಡುಸಾಬ್ ಮನೆಯ ಹತ್ತಿರ,
ಕಟುಗರ ಓಣಿ, ಎಸ್.ಆರ್ ನಗರದ ಹೊಸಪೇಟೆ.

ನಿಮ್ಮ ವಿರುದ್ಧ ಮಾಡುವ ಆರೋಪ ಏನೆಂದರೆ,

ದಿನಾಂಕಃ 20.11.2014 ರಂದು ಹೊಸಪೇಟೆ ಎಸ್ .ಆರ್.ನಗರದ ವಾಸಿಯಾದ ಎಜಾಜ್ ಅಹ್ಮದ್ ಇವರ ಹೆಸರಿನಲ್ಲಿ ಪಾಸ್ ಪೋರ್ಟ ವೇರಿಫಿಕೇತನ್ ಬಂದಿದ್ದು ಹೊಸಪೇಟಿ ಪಟ್ಟಣ ಠಾಣೆಯ ಬರಹಗಾರರಾದ ಸಾಕ್ಷಿ-6 ಶ್ರೀಮತಿ ಗಂಗೂ ಮನ್ನಾಪೂರ ರವರು ದೂರವಾಣಿ ಮೂಲಕ ಪೊಲೀಸ್ ಠಾಣೆಗೆ ದಾಖಲಾತಿಗಳೊಂದಿಗೆ ಬಂದು ಹಾಜರಾಗಲು ಮತ್ತು ಇಬ್ಬರು ನೆರೆ -ಹೊರೆಯವರನ್ನು ಸಾಕ್ಷಿಯಾಗಿ ಕರೆದುಕೊಂಡು ಬರಲು ಸೂಚಿಸಿದ್ದು ಅದರಂತೆ ಆರೋಪಿಯಾದ ನೀವು ತನ್ನ ಅಣ್ಣನಾದ ಎಜಾಜ್ ಆಹ್ಮದ್ ನ ಹೆಸರಿನಲ್ಲಿ ಪಾಸ್

ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು ತಾನೇ ಎಜಾಜ್ ಆಹ್ಮದ್ ಅಂತಾ ದಾಖಲಾತಿಗಳನ್ನು ತಂದು ಹೊಸಪೇಟೆ ಪಟ್ಟಣ ಠಾಣೆಯಲ್ಲಿ ಪರಿಶೀಲನೆಗಾಗಿ ಹಾಜರುಪಡಿಸಿದ್ದು ಮತ್ತು ತನ್ನ ಅಕ್ಕ-ಪಕ್ಕದ ಮನೆಯವರಾದ ಸಾಕ್ಷಿ-4 ಹುಸೇನ್ ಮತ್ತು ಸಾಕ್ಷಿ-5 ಸಲೀಂ ಜಾವೀದ್ ಇವರಿಗೂ ಸಹ ತನ್ನ ಹೆಸರಿನ ಬದಲಾಗಿ ನನ್ನ ಅಣ್ಣ ಎಜಾಜ್ ಅಹ್ಮದ್ ನ ಹೆಸರು ಪಾಸ್ ಪೋರ್ಟ್ ಆಫೀಸಿಂದ ತಪ್ಪಾಗಿ ಬಂದಿದ್ದು ನಾನು ಅದನ್ನು ಸರಿಪಡಿಸಿಕೊಳ್ಳುತ್ತೇನೆ ಎಂದು ಹೇಳಿ ಅವರಿಂದ ಆರೋಪಿಯು ತಾನೇ ಎಜಾಜ್ ಆಹ್ಮದ್ ಅಂತಾ ಹೇಳಿಕೆಗಳನ್ನು ನೀಡಲು ಅವರಿಗೆ ನಂಬಿಸಿ ಅವರಿಂದ ಸುಳ್ಳು ಹೇಳಿಕೆಗಳನ್ನು ಕೊಡಿಸಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 465 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ಅಣ್ಣ ಸಾಕ್ಷಿ-8 ಎಜಾಜ್ ಅಹ್ಮದ್ ಇತನ ಜನನ ಪ್ರಮಾಣ ಪತ್ರವನ್ನು ತನ್ನದಲ್ಲವೆಂದು ಗೊತ್ತಿದ್ದರೂ ತನ್ನದೇ ಅಂತಾ ನೀಡಿ ಪಾಸ್ ಪೋರ್ಟ್ ಕಛೇರಿಗೆ ಮತ್ತು ಪೊಲೀಸ್ ಇಲಾಖೆಗೆ ಮೋಸ ಮಾಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 468 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ತನ್ನ ಅಣ್ಣನಾದ ಎಜಾಜ್ ಅಹ್ಮದ್ ಹೆಸರಿನಲ್ಲಿ ಪಾಸ್ ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು ತಾನೇ ಎಜಾಜ್ ಆಹ್ಮದ್ ಅಂತಾ ಮತ್ತೊಬ್ಬನಂತೆ ನಟಿಸಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 419 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-8 ಎಜಾಜ್ ಅಹ್ಮದ್ ಇತನ ಜನನ ಪ್ರಮಾಣ ಪತ್ರವನ್ನು ತನ್ನದಲ್ಲವೆಂದು ಗೊತ್ತಿದ್ದರೂ ತನ್ನದೇ ಅಂತಾ ನೀಡಿ ಪಾಸ್ ಪೋರ್ಟ ಕಛೇರಿಗೆ ಮತ್ತು ಪೊಲೀಸ್ ಇಲಾಖೆಗೆ ಮೋಸ ಮಾಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 420 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಕೊನೆಯಾದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ತನ್ನ ಅಣ್ಣ ಎಜಾಜ್ ಅಹಮ್ಮದ್ ನ ದಾಖಲೆಗಳನ್ನು ಬಳಸಿಕೊಂಡು ತನಗೆ ತಪ್ಪೆಂದು ತಿಳಿದಿದ್ದು ಸಹ ಸುಳ್ಳು ದಾಖಲೆಗಳಿಂದ ನೀಡಿ ಪಾಸ್ ಪೋರ್ಟ್ ಪಡೆದಿದ್ದು ಈ ಮೂಲಕ 12 (1) ( ಬಿ ) ಪಾಸ್ ಪೋರ್ಟ ಯಾಕ್ಟ್ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಈ ಮೇಲ್ಕಂಡ ಆಪಾದನೆಯನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು, ಈ ಮೂಲಕ ಈ ನ್ಯಾಯಾಲಯ ವಿಚಾರಣೆಗೆ ಒಳಪಟ್ಟಿರುವುದಾಗಿ ನಿರ್ದೇಶಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಹೊಸಪೇಟೆ.

**Date:20.04.2021**